ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ
ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ
ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ (೭)

"ಬಾಲ್ಯ ಯೌವನ ಮುಪ್ಪುಗಳು, ಜಾಗ್ರತ್ ಸ್ವಪ್ನ ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದುಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಅಂತರಂಗದಲ್ಲಿ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೊ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ."

ನಾವು ಯಾವುದೇ ವಿಷಯವನ್ನೂ ಇಲ್ಲವೆಂದು ನಿರಾಕರಿಸಬಹುದು. ಬೌದ್ಧಶೂನ್ಯವಾದಿಗಳು ಎಲ್ಲ ಬಗೆಯ ಸತ್ಯವನ್ನೂ ನಿರಾಕರಿಸುತ್ತಾರೆ. ಅವರ ಪಾಲಿಗೆ ಕೇವಲ ಬದಲಾವಣೆಯೊಂದೇ ಇರುವಂತಹದು, ಅದರ ಹಿಂದೆ ಯಾವ ಸತ್ಯವೂ ಇಲ್ಲ. ನಿರ್ವಾಣವೆಂದರೆ, ದೀಪ ಆರಿಹೋದಂತೆ, ಇಲ್ಲವಾಗುವುದು. ಶ್ರೀಶಂಕರಾಚಾರ್ಯರು ಇದನ್ನು ಒಪ್ಪುವುದಿಲ್ಲ. **ಸರ್ವಬುದ್ಧೀನಾಂ ಮೃಷಾತ್ವೇ ಅಸತ್ಯಬುದ್ಧಿರಪಿ ಅನುಪಪತ್ತೇಃ** – "ಎಲ್ಲವನ್ನೂ ನಿರಾಕರಿಸಿದರೆ, ಆ ನಿರಾಕರಣಬುದ್ಧಿಯನ್ನೂ ನಿರಾಕರಿಸಬೇಕಾಗುತ್ತದೆ" (*ಬೃಹದಾರಣ್ಯಕೋಪನಿಷತ್ ಭಾಷ್ಯ*, ೧.೨.೧) ಎಂದು ಅವರು ಹೇಳುತ್ತಾರೆ. ಆದ್ದರಿಂದ ಅವರ ಪ್ರಕಾರ ಯಾವುದೋ ಒಂದು ಭಾವವಸ್ತು ಇರಲೇಬೇಕು. ಇದನ್ನು 'ವಿವೇಕಚೂಡಾಮಣಿ'ಯಲ್ಲಿ ಅವರೇ ಹೀಗೆ ಹೇಳುತ್ತಾರೆ:

ಅಸ್ತಿ ಕಶ್ಚಿತ್ ಸ್ವಯಂ ನಿತ್ಯಂ ಅಹಂ ಪ್ರತ್ಯಯಲಂಬನಃ ।
ಅವಸ್ಥಾತ್ರಯಸಾಕ್ಷೀ ಸನ್ ಪಂಚಕೋಶವಿಲಕ್ಷಣಃ ॥
(೧೨೫)

" 'ನಾನು' ಎಂಬ ಪ್ರಜ್ಞೆಗೆ ಆಶ್ರಯವಾಗಿರುವ, ತಾನೇ ತಾನಾಗಿರುವ, ನಿತ್ಯವಾಗಿರುವ, ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿರುವ ಮತ್ತು ಪಂಚಕೋಶಗಳಿಂದ ಬೇರೆಯಾಗಿರುವ ಯಾವದೋ ಒಂದು ಸತ್ಯ ಇದ್ದೇ ಇದೆ."

ಎಲ್ಲ ಕೋಶಗಳ, ಎಲ್ಲ ಅವಸ್ಥೆಗಳ ಸಾಕ್ಷಿಯಾಗಿ ಆತ್ಮನು ಬೆಳಗುತ್ತಿರುವನು. 'ದೃಗ್-ದೃಶ್ಯ-ವಿವೇಕ'ದ ಮೊದಲನೆಯ ಶ್ಲೋಕವು ವಿಶ್ಲೇಷಣಾತ್ಮಕವಾಗಿ ಇದನ್ನು ಹೀಗೆ ವಿವರಿಸುತ್ತದೆ:

ರೂಪಂ ದೃಶ್ಯಂ ಲೋಚನಂ ದೃಕ್
ತದ್ದೃಶ್ಯಂ ದೃಕ್ ತು ಮಾನಸಂ।
ದೃಶ್ಯಾ ಧೀವೃತ್ತಯಃ ಸಾಕ್ಷೀ
ದೃಗೇವ ನ ತು ದೃಶ್ಯತೇ॥ (೧)

"ಹೊರಗಿನ ರೂಪಗಳು ದೃಶ್ಯವಾದರೆ (ವಿಷಯ) ಕಣ್ಣು ಅವನ್ನು ನೋಡುವ ದೃಕ್ (ವಿಷಯಿ). ಅದೇ ಕಣ್ಣು ಮನಸ್ಸುಗಳಿಗೆ ವಿಷಯವಾಗುತ್ತದೆ (ಮನಸ್ಸಿನ ಮೂಲಕ ಕಣ್ಣನ್ನು ಕಲ್ಪಿಸಿಕೊಳ್ಳಬಹುದು). ಮನಸ್ಸಿನ ವೃತ್ತಿಗಳು ಸಾಕ್ಷಿಗೆ ವಿಷಯವಾಗುತ್ತವೆ. ಆದರೆ ಆ ಸಾಕ್ಷಿಯು ಯಾವಾಗಲೂ ವಿಷಯಿಯೇ, ಅದು ವಿಷಯವಾಗುವುದೇ ಇಲ್ಲ."

**ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್** – "ತಿಳಿಯುವವನನ್ನೇ ತಿಳಿಯುವುದು ಹೇಗೆ?" ಎಂದು ಬೃಹದಾರಣ್ಯಕ ಉಪನಿಷತ್ತು ಪ್ರಶ್ನಿಸುತ್ತದೆ. ಒಂದು ಬೆರಳಿನ ತುದಿಯನ್ನು ಅದೇ ಬೆರಳಿನಿಂದ ಮುಟ್ಟಲಾಗದೇ ಇರುವಂತೆ ಆತ್ಮನನ್ನೂ ಜ್ಞಾನವಿಷಯವಾಗಿ ತಿಳಿಯಲಾಗುವುದಿಲ್ಲ.

ಆದರೆ, ಅಂತಃಸಾಕ್ಷಿಯಾಗಿ ಆತ್ಮನು ಎಲ್ಲರ ಅರಿವಿಗೆ ಬರುತ್ತಿರುವನು. ಆತ್ಮನ ಅರಿವಿಲ್ಲದೆ ಯಾವುದನ್ನೂ ಅರಿಯಲಾಗುವುದಿಲ್ಲ. ಮೊದಲು 'ನಾನು' ಎಂಬುದು ಇರಬೇಕು, ಅನಂತರ ಎಲ್ಲವೂ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಜ್ಞಾತೃ ತನ್ನನ್ನು ತಾನೇ ಅರಿಯಲಾರನು. ನಾನು ಎಲ್ಲವನ್ನೂ ನೋಡುತ್ತೇನೆ. ಆದರೆ ನನ್ನನ್ನು ನಾನು ನೋಡಲಾರೆ. ಆತ್ಮ ಜ್ಞಾತೃ; ಸರ್ವೇಶ್ವರನಾದ, ನಿತ್ಯಸತ್ಯನಾದ ಅವನೇ ಈ ಪ್ರಪಂಚದ ದೃಶ್ಯಗಳಿಗೆಲ್ಲ ಕಾರಣ. ಆದರೆ ಪ್ರತಿಬಿಂಬದ ವಿನಃ ಅವನು ತನ್ನನ್ನು ತಾನೇ ನೋಡಲಾರ, ಅರಿತುಕೊಳ್ಳಲಾರ. ನೀವು ಕನ್ನಡಿಯಲ್ಲಿ ಅಲ್ಲದೆ ಬೇರೆ ಎಲ್ಲೂ ನಿಮ್ಮ ಮುಖವನ್ನು ನೋಡಿಕೊಳ್ಳಲಾರಿರಿ. ಆತ್ಮನೂ ತಾನು ಪ್ರತಿಬಿಂಬಿತವಾಗದೆ ಇದ್ದರೆ ತನ್ನನ್ನು ತಾನು ಅರಿಯಲಾರನು. ಆದಕಾರಣ ಈ ವಿಶ್ವವೆಲ್ಲ ತನ್ನನ್ನು ತಾನು ಅರಿಯಲು ಪ್ರಯತ್ನಿಸುತ್ತಿರುವ ಆತ್ಮವೇ ಆಗಿದೆ. ಈ ಪ್ರತಿಬಿಂಬ ಮೊದಲು ಪ್ರೋಟೋಪ್ಲಾಸಂನಲ್ಲಿ ಕಾಣುವುದು. ಅನಂತರ ಗಿಡ ಮರ ಪ್ರಾಣಿಗಳು ಇವುಗಳಲ್ಲಿ. ಹೀಗೆ ಕೊನೆಗೆ ಪೂರ್ಣಾತ್ಮನೆಂಬ ಶ್ರೇಷ್ಠ ಪ್ರತಿಬಿಂಬವನ್ನು ಮುಟ್ಟುವವರೆಗೆ ಇದು ಮುಂದುವರಿಯುತ್ತ, ಉತ್ತಮ ಉತ್ತಮತರ ಪ್ರತಿಬಿಂಬಗಳನ್ನು ಹೊರಗೆಡಹುತ್ತ ಹೋಗುವುದು. ಒಬ್ಬನು ತನ್ನ ಪ್ರತಿಬಿಂಬವನ್ನು ಮೊದಲು ಬಗ್ಗಡದ ನೀರಿರುವ ಗುಂಡಿಯಲ್ಲಿ ನೋಡಿದಂತೆ ಇರುವುದು. ಅಲ್ಲಿ ಕೇವಲ ಅವನ ರೂಪುರೇಖೆ ಮಾತ್ರ ಕಾಣುತ್ತದೆ. ಅನಂತರ ಶುಭ್ರವಾದ ನೀರಿಗೆ ಬಂದರೆ ಅಲ್ಲಿ ಶುಭ್ರವಾದ ಪ್ರತಿಬಿಂಬವನ್ನು ಅವನು ಕಾಣುತ್ತಾನೆ. ಅನಂತರ ಹೊಳೆಯುತ್ತಿರುವ ಲೋಹದಲ್ಲಿ ನೋಡಿದಾಗ ಅವನ ಪ್ರತಿಬಿಂಬ ಇನ್ನೂ ಸ್ಪಷ್ಟವಾಗುತ್ತದೆ. ಕೊನೆಯಲ್ಲಿ ಕನ್ನಡಿಯಲ್ಲಿ ನೋಡಿದಾಗ ತಾನು ನಿಜವಾಗಿ ಹೇಗೆ ಇರುವನೊ ಹಾಗೆಯೇ ಅವನು ಕಾಣುತ್ತಾನೆ" (*ಕೃತಿಶ್ರೇಣಿ*, ೬:೨೫೨).

ದೀಪವು ಎಲ್ಲವನ್ನೂ ಬೆಳಗುತ್ತದೆ, ಆದರೆ ಅದನ್ನು ಬೆಳಗುವುದಕ್ಕೆ ಯಾವ ದೀಪವೂ ಬೇಕಾಗುವುದಿಲ್ಲ. ಹಾಗೆಯೇ ಆತ್ಮನು ಎಲ್ಲವನ್ನೂ ಅರಿಯುತ್ತಾನೆ ಮತ್ತು ಅದರ ಮೂಲಕ ತನ್ನನ್ನು ತಾನೇ ಅರಿಯುತ್ತಾನೆ – ಜ್ಞಾನವಸ್ತುವಾಗಿ ಅಲ್ಲ, ಸ್ವ-ಪ್ರಜ್ಞೆಯಾಗಿ. ಆತ್ಮನು ಸಾಕ್ಷಿಯಾಗಿ ಎಲ್ಲವನ್ನೂ ಬೆಳಗುತ್ತಿರುವನು ಎಂಬುದನ್ನು ಸೂಕ್ತವಾದ ಒಂದು ರೂಪಕದ ಮೂಲಕ 'ಪಂಚದಶಿ'ಯಲ್ಲಿ ಹೀಗೆ ವಿವರಿಸಲಾಗಿದೆ :

ಅಹಂಕಾರಃ ಪ್ರಭುಃ ಸಭ್ಯಾ ವಿಷಯಾ ನರ್ತಕೀ ಮತಿಃ।
ತಾಲಾದಿಧಾರಿಣ್ಯಕ್ಷಾನಿ ದೀಪಃ ಸಾಕ್ಷ್ಯವಭಾಸಕಃ ॥
(೧೦.೧೪)

"ಒಂದು ರಾಜಸಭೆ. ರಾಜನು ಸಿಂಹಾಸನದ ಮೇಲೆ

ಕುಳಿತುಕೊಂಡಿದ್ದಾನೆ. ಸುತ್ತಲೂ ಸಭಾಸದರು ನೆರೆದಿದ್ದಾರೆ. ಯುವತಿಯೋರ್ವಳು ನರ್ತಿಸುತ್ತಿದ್ದಾಳೆ. ಕೆಲವರು ತಾಳ ಮೃದಂಗಾದಿಗಳನ್ನು ನುಡಿಸುತ್ತಿದ್ದಾರೆ. ಇವೆಲ್ಲವನ್ನೂ ದೀಪ ಜಗಜಗಿಸುತ್ತಿದೆ. ನಮ್ಮ ವ್ಯಕ್ತಿತ್ವವೇ ಈ ರಾಜಸಭೆ. ಅಹಂಕಾರವೇ ಸಿಂಹಾಸನಾಧೀಶನಾದ ರಾಜ. ಇಂದ್ರಿಯ ವಿಷಯಗಳೇ ಸಭಾಸದರು. ನರ್ತಕಿಯೇ ಮನಸ್ಸು. ಆ ನರ್ತನಕ್ಕೆ ತಕ್ಕಂತೆ ತಾಲಾದಿಗಳನ್ನು ನುಡಿಸುತ್ತಿರುವವರು ಇಂದ್ರಿಯಗಳು. ಇವೆಲ್ಲವನ್ನು ಬೆಳಗುವ ದೀಪವೇ ಸಾಕ್ಷಿ." ಹೊರಗಿನ ಸಭೆಯಲ್ಲಿ ದೀಪವು ಜಡ, ತಾನು ಬೆಳಗುತ್ತಿರುವ ಅರಿವು ಅದಕ್ಕಿರುವುದಿಲ್ಲ. ಆದರೆ ಇಲ್ಲಿ ಬೆಳಗುವವನು ಆತ್ಮಚೈತನ್ಯ ಮತ್ತು ಇಲ್ಲಿ ಅರಿವೇ ಬೆಳಕು.

ಸ್ವಾಮಿ ವಿವೇಕಾನಂದರ ಪ್ರಕಾರ ಆತ್ಮನು ಕೇವಲ ಎಲ್ಲ ಅರಿವಿನ ಮೂಲ ಮಾತ್ರವಲ್ಲ, ಎಲ್ಲ ಮೌಲ್ಯಗಳ ಮೂಲವೂ ಹೌದು. ಅವರು ಹೀಗೆ ಹೇಳುತ್ತಾರೆ: "ಈ ಆತ್ಮನ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಹಲವು ಭೌತಿಕ ಬೆಳವಣಿಗೆಗಳಾಗುವುವು; ಆಲೋಚನಾ ಪ್ರಪಂಚದ ಮೇಲೆ ಬೀರಿದರೆ ಬುದ್ಧಿ ತನ್ನ ಪರಾಕಾಷ್ಠೆಯನ್ನು ಮುಟ್ಟುವುದು; ತನ್ನ ಮೇಲೆಯೇ ಅದನ್ನು ಬೀರಿಕೊಂಡರೆ ಮಾನವನು ದೇವ ನಾಗುವನು" (*ಕೃತಿಶ್ರೇಣಿ*, ೫:೩೦೦).

ಸ್ವಾಮೀಜಿ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ನಿಮಗೆ ನೀವೇ ಬೋಧಿಸಿಕೊಳ್ಳಿ, ಪ್ರತಿಯೊಬ್ಬರಿಗೂ ಅವರ ನಿಜ ಸ್ವರೂಪವನ್ನು ಬೋಧಿಸಿ. ಸುಪ್ತಾತ್ಮವನ್ನು ಕೂಗಿ ಕರೆಯಿರಿ, ಅದು ಹೇಗೆ ಜಾಗೃತವಾಗುತ್ತದೆಂಬುದನ್ನು ನೋಡಿ. ಸುಪ್ತಾತ್ಮವು ಪ್ರಜ್ಞಾಪೂರ್ಣವಾಗಿ ಕ್ರಿಯಾಶೀಲವಾದಾಗ ಶಕ್ತಿ ಬರುತ್ತದೆ, ವೈಭವ ಬರುತ್ತದೆ, ಒಳ್ಳೆಯತನ ಬರುತ್ತದೆ. ಪಾವಿತ್ರ್ಯ ಬರುತ್ತದೆ, ಮತ್ತು ಮಹೋನ್ನತವಾದುದೆಲ್ಲವೂ ಬರುತ್ತದೆ" (*ಕೃತಿಶ್ರೇಣಿ*, ೩.೭೭).

"ಭಗವದಭಿವ್ಯಕ್ತಿಯ ದೃಷ್ಟಿಯಿಂದ ಪ್ರತಿಯೊಂದರ ಮೌಲ್ಯವನ್ನೂ ನಿರ್ಧರಿಸಬೇಕು. ನಾಗರಿಕತೆಯೆಂದರೆ ಮಾನವನಲ್ಲಿ ಆ ದಿವ್ಯತೆಯ ಅಭಿವ್ಯಕ್ತಿ" (*ಕೃತಿಶ್ರೇಣಿ*, ೩.೪೬೨) ಎಂದು ಸ್ವಾಮಿ ವಿವೇಕಾನಂದರು ಇನ್ನೊಂದು ಕಡೆ ಹೇಳುತ್ತಾರೆ. ಹೀಗೆ ಎಲ್ಲವನ್ನೂ ಆತ್ಮನ ಅಭಿವ್ಯಕ್ತಿಯ ದೃಷ್ಟಿಯಿಂದ ಅವರು ನೋಡುತ್ತಾರೆ. ಅವರ ದೃಷ್ಟಿಯಲ್ಲಿ ವಿಕಾಸವೆಂದರೆ ಸುಪ್ತಾವಸ್ಥೆಯಲ್ಲಿರುವ ಆತ್ಮನು ಸಸ್ಯ, ಪ್ರಾಣಿ, ಮನುಷ್ಯ ಇತ್ಯಾದಿ ಹಂತಗಳ ಮೂಲಕ ವಿಕಾಸಹೊಂದುತ್ತ ಕೊನೆಯಲ್ಲಿ ದೇವಮಾನವ ಸ್ಥಿತಿಯನ್ನು ಮುಟ್ಟುವುದು. "ಅಮೀಬವು ಸುಪ್ತಾವಸ್ಥೆಯಲ್ಲಿರುವ ಬುದ್ಧ" ಎಂದು ಅವರು ಹೇಳುತ್ತಾರೆ. ಹೀಗೆ ಎಲ್ಲವೂ ಚೈತನ್ಯವಿಕಾಸದ ವಿವಿಧ ಹಂತಗಳಲ್ಲಿವೆ ಎನ್ನುವುದು ಅವರ ಅಭಿಪ್ರಾಯ.

ಆದ್ದರಿಂದ ತನ್ನ ನಿಜಸ್ವರೂಪವಾದ ದೈವತ್ವವನ್ನು ಅರಿಯುವುದೇ ವೇದಾಂತ. ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಮೊದಲು ನಿನ್ನನ್ನು ನೀನು ತಿಳಿ. ಅನಂತರ ದೇವರನ್ನು ತಿಳಿಯುವೆ. ನನ್ನ ಅಹಂಕಾರ ಎಂದರೇನು? ಇದೇನು ನನ್ನ ಕೈಗಳೇ, ಕಾಲುಗಳೇ, ಮಾಂಸವೇ, ರಕ್ತವೇ, ಅಥವಾ ನನ್ನ ದೇಹದ ಮತ್ತಾವುದಾದರೂ ಅಂಗವೇ? ಸರಿಯಾಗಿ ಆಲೋಚನೆ ಮಾಡಿ ನೋಡು. ಆಗ 'ನಾನು' ಎಂಬ ಅಹಂಕಾರವಿಲ್ಲವೆಂದು ಗೊತ್ತಾಗುತ್ತದೆ. ಈರುಳ್ಳಿಯ ಸಿಪ್ಪೆಯನ್ನು ಹೆಚ್ಚು ಬಿಡಿಸಿದಂತೆಲ್ಲ ಮತ್ತೂ ಹೆಚ್ಚು ಸಿಪ್ಪೆ ಕಾಣುತ್ತದೆ. ಅದರಲ್ಲಿ ತಿರುಳು ಎಂಬುದೇನೂ ಕಾಣುವುದಿಲ್ಲ. ಅದರಂತೆಯೇ ನೀವು ಅಹಂಕಾರವನ್ನು ವಿಶ್ಲೇಷಣೆ ಮಾಡುತ್ತ ಹೋದರೆ ಅದು ಶೂನ್ಯದಲ್ಲಿ ಲಯವಾಗುತ್ತದೆ. ಕೊನೆಗೆ ಏನು ಉಳಿಯುವುದೊ ಅದೇ ಶುದ್ಧ ಆತ್ಮ. ಅಹಂಕಾರ ಲಯವಾದಾಗ ದೇವರು ಕಾಣುವನು" (*ಶ್ರೀಗುರುದೇವರ ವಚನ*, ಪು. ೧).

(ಮುಂದುವರಿಯುವುದು)

## ಸ್ನೇಹಪ್ರಭ

**ಅನೇಕ ಪುಸ್ತಕಗಳನ್ನು ಓದಿ ಆದರ್ಶ ಜೀವನದತ್ತ ಆಕರ್ಷಿತರಾಗುತ್ತೇವೆ. ಆದರೆ ಸುತ್ತಲಿನ ಸಮಾಜ ಅಂತಹ ಆದರ್ಶ ಜೀವನವನ್ನು ನಡೆಸಲು ಅವಕಾಶ ಮಾಡಿಕೊಡುವುದಿಲ್ಲ. ಅದಕ್ಕೆ ಏನು ಮಾಡಬೇಕು? ಆ ಆದರ್ಶಗಳನ್ನು ಅನುಷ್ಠಾನಗೊಳಿಸಲು ಸಾಧ್ಯವೇ ಇಲ್ಲವೇ?**

ಯಾವುದೇ ಒಂದು ಆದರ್ಶವು 'ಆದರ್ಶ'ವೆನಿಸುವುದು ಪ್ರತಿಕೂಲ ಪರಿಸ್ಥಿತಿಯಲ್ಲಿಯೇ. ಎಲ್ಲರೂ ಅದನ್ನು ಒಪ್ಪಿ ಅನುಸರಿಸುತ್ತಿದ್ದರೆ ಅದು ಸಾಮಾನ್ಯ ವಿಷಯವಾಗಿಬಿಡುತ್ತದೆ; ಆದರ್ಶವೆನಿಸಿಕೊಳ್ಳುವುದಿಲ್ಲ. ಅನುಕೂಲ ಪರಿಸ್ಥಿತಿಯಲ್ಲಿ ಯಾರು ಬೇಕಾದರೂ ಯಾವುದೇ ಆದರ್ಶವನ್ನು ಬೇಕಾದರೂ ಅನುಸರಿಸಬಹುದು. ಅದರಲ್ಲಿ ಯಾವ ಹೆಗ್ಗಳಿಕೆಯೂ ಇರುವುದಿಲ್ಲ. ಎಲ್ಲರೂ ಸತ್ಯಸಂಧರಾಗಿರುವಾಗ ಸತ್ಯವಚನ ಪರಿಪಾಲನೆ ಅತ್ಯಂತ ಸ್ವಾಭಾವಿಕವಾಗಿಬಿಡುತ್ತದೆ. ಅದನ್ನು ಆಗ ಒಂದು ಆದರ್ಶ ಎಂದು ಕರೆಯಲಾಗುವುದಿಲ್ಲ. ಅಂತಹ ಸನ್ನಿವೇಶದಲ್ಲಿ ಸುಳ್ಳು ಹೇಳುವುದೇ ಒಂದು ದೊಡ್ಡ ಸಾಹಸವಾಗಬಹುದು. ಎಲ್ಲರೂ ಊಟ ಮಾಡುತ್ತಾರೆಂದು ತಾನೂ ಊಟ ಮಾಡುವುದು ಆದರ್ಶವಲ್ಲ – ಉಪವಾಸ ವ್ರತವನ್ನು ಆಚರಿಸುವುದು ಆದರ್ಶವಾಗುತ್ತದೆ. ಉನ್ನತ ಆದರ್ಶದ ಕೊರತೆಯಿಂದಾಗಿ ಎಲ್ಲರೂ ವೈಯಕ್ತಿಕವಾಗಿ ಹಣವನ್ನು ಇಟ್ಟುಕೊಳ್ಳಲು ಬಯಸುತ್ತಾರೆ. ಅಂತಹ ಸಂದರ್ಭದಲ್ಲಿ ವೈಯಕ್ತಿಕವಾಗಿ ಒಂದು ಪೈಸೆಯನ್ನೂ ಇಟ್ಟುಕೊಳ್ಳದೆ ಜೀವಿಸುತ್ತೇನೆ ಎಂದು ಒಬ್ಬನು ನಿರ್ಧರಿಸಿ ಅದರಂತೆ ನಡೆದರೆ ಆಗ ಅದು ಆದರ್ಶವಾಗುತ್ತದೆ. ಎಲ್ಲರೂ ಮೊಬೈಲ್ ಫೋನನ್ನು ಇಟ್ಟುಕೊಳ್ಳಲು ಹಾತೊರೆಯುತ್ತಿರುವಾಗ, ಮೊಬೈಲ್ ಫೋನ್ ಇಲ್ಲದೇ ಇರುವುದೂ ಒಂದು ಆದರ್ಶವಾಗಬಹುದು.

ಆದ್ದರಿಂದ ಆದರ್ಶವನ್ನು ಅನುಸರಿಸುವುದೆಂದರೆ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವುದೆಂದೇ ಅರ್ಥ. ಇದಕ್ಕಾಗಿ ಆಂತರಿಕ ಬಲ ಬೇಕಾಗುತ್ತದೆ; ಸದೃಢ ಇಚ್ಛಾಶಕ್ತಿಯ ಆವಶ್ಯಕತೆ ಇರುತ್ತದೆ. ಆದರ್ಶವನ್ನು ನಾವು ಭದ್ರವಾಗಿ ಹಿಡಿದುಕೊಳ್ಳಬೇಕು. ಈ ಬಗ್ಗೆ ಸ್ವಾಮಿ ವಿವೇಕಾನಂದರು ನುಡಿದ ಮಾತುಗಳ ಅಮೃತಸಿಂಚನ ನಮ್ಮ ಮೇಲೆ ಆಗಲಿ: "ಒಂದು ಆದರ್ಶವಿರುವುದು ಮೇಲು. ಈ ಆದರ್ಶ ನಮ್ಮ ಹೃದ್ಗತವಾಗಿ, ನಮ್ಮ ರಕ್ತನಾಳಗಳಲ್ಲೆಲ್ಲ ಸಂಚರಿಸಿ, ಪ್ರತಿಯೊಂದು ರಕ್ತಕಣವೂ ಈ ಭಾವನೆಯಿಂದ ಅನುರಣಿತವಾಗಿ, ನಮ್ಮ ದೇಹದ ಅಂಗೋಪಾಂಗಗಳನ್ನೆಲ್ಲ ಸಂಚರಿಸುವ ತನಕ ನಾವು ಅದನ್ನು ಕೇಳಬೇಕು. ನಾವು ಅದರ ಕುರಿತು ಧ್ಯಾನಿಸಬೇಕು. 'ಹೃದಯ ತುಂಬಿ ತುಳುಕಾಡುವಾಗ ಮಾತು ಹೊರಹೊಮ್ಮುತ್ತದೆ.' ಕೈಗಳೂ ಕೆಲಸಮಾಡುತ್ತವೆ." ಆಗ ಆದರ್ಶಗಳು ಅನುಷ್ಠಾನದಲ್ಲಿ ಇಳಿಯುತ್ತವೆ.

(ಬರಹ : ಸ್ವಾಮಿ ನಿತ್ಯಸ್ಥಾನಂದ)

# ಭ್ರಷ್ಟಾಚಾರದ ಬಾಗಿಲುಗಳು

ಕೆ. ಅನಂತರಾಮು



ಸರ್ವೋಚ್ಚ ನ್ಯಾಯಾಲಯ, ನವದೆಹಲಿ

ಭ್ರಷ್ಟಾಚಾರವು ನೀತಿಬಾಹಿರವಾದದ್ದು; ಧರ್ಮವಿರುದ್ಧವಾದ್ದು; ಮಾನವೀಯ ಜನಾಂಗಕ್ಕೆ ಕಲಂಕಪ್ರಾಯವಾದದ್ದು. ಇದನ್ನು ಅನೇಕ ಸಾಹಿತ್ಯಿಕ ನಿದರ್ಶನಗಳಿಂದ ಮನೋಹರ ಶೈಲಿ ಮತ್ತು ಭಾಷೆಯಲ್ಲಿ ವಿವರಿಸಿರುವ ಮಾನ್ಯ ಲೇಖಕರು ನಿವೃತ್ತ ಕಾಲೇಜು ಪ್ರಾಧ್ಯಾಪಕರು. ಉತ್ತಮ ಸಾಹಿತಿಗಳಾದ ಇವರು ಪ್ರಸಿದ್ಧ ವಾಗ್ಮಿಗಳು, ಭಾಷಾತಜ್ಞರು ಹಾಗೂ ಸಂಶೋಧಕರು ಕೂಡ.

## ಭ್ರಷ್ಟಾಚಾರ ಎಂದರೇನು?

ಧರ್ಮವಿರುದ್ಧವೂ ನೀತಿಬಾಹಿರವೂ ದಾರಿತಪ್ಪಿದುದೂ ನೀಚತನದಿಂದ ಕೂಡಿದುದೂ ಆದ ದುಷ್ಟನಡವಳಿಕೆಗೆ 'ಭ್ರಷ್ಟಾಚಾರ' ಎಂದು ಹೆಸರು. ಒಂದೇ ಮಾತಿನಲ್ಲಿ ಹೇಳುವುದಾದರೆ ನೀತಿಗೆಟ್ಟ ನಡವಳಿಕೆಯೇ ಭ್ರಷ್ಟಾಚಾರ. ಅದು ರಾಷ್ಟ್ರದ ಸಾಮಾಜಿಕ ಜೀವನಕ್ಕೆ ಕಂಟಕಪ್ರಾಯವಾಗಿದೆ. ಅದು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತದೆ; ಅದು ರಾಷ್ಟ್ರದ ಪ್ರಗತಿಗೆ ಮಾರಕವಾಗುತ್ತದೆ. ಅದು ರಾಷ್ಟ್ರದ ಸ್ವಾತಂತ್ರ್ಯ, ಸರ್ವೋದಯಗಳನ್ನು ನಾಶಪಡಿಸುತ್ತದೆ. ಅದು ರಾಷ್ಟ್ರದ ಕೀರ್ತಿಗೆ ಮಸಿಬಳಿಯುತ್ತದೆ. ಅದು ಆನೆ ನುಂಗಿದ ಬೇಲದ ಕಾಯಿಯಂತೆ ರಾಷ್ಟ್ರಶಕ್ತಿಯನ್ನು ಒಳಗೊಳಗೇ ಪೊಳ್ಳು ಮಾಡಿಬಿಡುತ್ತದೆ. ಅದು ಅಸಂತೋಷ, ಅಶಿಸ್ತು, ಅಶಾಂತಿ, ಅರಾಜಕತೆ, ಅಪನಂಬಿಕೆಗಳನ್ನು ಹಬ್ಬಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಭ್ರಷ್ಟಾಚಾರವು ಮನುಷ್ಯರನ್ನು ಗುಲಾಮರನ್ನಾಗಿ ಮಾಡಿ ಕೂಡಿಸುತ್ತದೆ.

## ಭ್ರಷ್ಟಾಚಾರವು ಧನಮೂಲವಾದುದು

ಈ ಜಗತ್ತು ಹೇಗೆ ಧನಮೂಲವಾದುದೋ ಹಾಗೆಯೇ ಭ್ರಷ್ಟಾಚಾರವೂ ಧನಮೂಲವಾದುದು. ಭ್ರಷ್ಟಾಚಾರಕ್ಕೆ ಬೇಕಾದಷ್ಟು ವೇಷಾಂತರಗಳಿವೆ. ಕೊಲೆ ಹಿಂಸೆ ಸುಲಿಗೆ ಲೂಟಿಗಳಿಗೆ ಹಿಂಸಾಚಾರವೆಂದೂ, ಸ್ತ್ರೀಯರ ಮೇಲಿನ ದೌರ್ಜನ್ಯ ಮಾನ ಭಂಗಗಳಿಗೆ ಅತ್ಯಾಚಾರವೆಂದೂ, ಪರಂಪರಾಗತವಾಗಿ ಬಂದ ನಂಬಿಕೆ ನಡವಳಿಕೆ, ಆಚಾರ ವಿಚಾರಗಳಿಗೆ ವಿರುದ್ಧವಾದ ವರ್ತನೆಗೆ ಅನಾಚಾರವೆಂದೂ, ನೋಡುವವರ ಕಣ್ಣುಕುಕ್ಕುವ ಜುಗುಪ್ಸಾದಾಯಕ ಅಸಭ್ಯವರ್ತನೆಗೆ ದುರಾಚಾರವೆಂದೂ, "ನನಗೆ ಸ್ವಾತಂತ್ರ್ಯವಿದೆ, ಬೇಕಾದ್ದನ್ನು ಮಾಡಿಕೊಳ್ಳುತ್ತೇನೆ" ಎಂಬ ವರ್ತನೆಗೆ ಸ್ವೇಚ್ಛಾಚಾರವೆಂದೂ ಹೆಸರಿಡಬಹುದಾಗಿದೆ. ಸತ್ಯಕ್ಕೆ ಒಂದೇ ನಾಲಗೆ, ಆದರೆ ಸುಳ್ಳಿಗೆ ಸಾವಿರ ನಾಲಗೆಗಳು; ಸದಾಚಾರಕ್ಕೆ ಒಂದೇ ಮುಖ, ಆದರೆ ಭ್ರಷ್ಟಾಚಾರಕ್ಕೆ ಸಾವಿರ ಮುಖಗಳು. ಭ್ರಷ್ಟಾಚಾರದ ಉಗಮಸ್ಥಾನಗಳಲ್ಲಿ ಕೆಲವನ್ನು ಕುಮಾರವ್ಯಾಸನು ಹೀಗೆ ವರ್ಣಿಸಿದ್ದಾನೆ:

> ವಿತಥಭಾಷಿತವನ್ಯವಿತ್ತಾ
> ಹೃತಿ ಪರವ್ಯಾಪಾದವಾತ್ಮ
> ಸ್ತುತಿ ಪರಸ್ತ್ರೀವ್ಯಸನವತ್ಯಾಚಾರ ಬಕವೃತ್ತಿ
> ಕೃತವಿನಾಶನ ಡಂಭ ಹಿಂಸಾ
> ರತಿ ನಿಜಾನ್ವಯ ಧರ್ಮಕರ್ಮ
> ಚ್ಯುತಿಗಳಿವು ದೋಷಾಂಕುರಂಗಳು ವಿಪ್ರ ಕೇಳೆಂದ

(ಕುಮಾರವ್ಯಾಸ ಭಾರತ, ಅರಣ್ಯಪರ್ವ, ೧೫ : ೧೪)

ಸುಳ್ಳುಹೇಳುವುದು, ಪರದ್ರವ್ಯವನ್ನು ಅಪಹರಿಸುವುದು, ಅನ್ಯರನ್ನು ಹಾಳುಮಾಡುವ ಹಂಚಿಕೆ ಹೂಡುವುದು, ತನ್ನನ್ನು ತಾನೇ ಹೊಗಳಿಕೊಳ್ಳುವುದು, ಪರಸ್ತ್ರೀಕೂಟಕ್ಕೆ ಕಾತರಿಸುವುದು, ಧರ್ಮವಿರುದ್ಧವಾದ ಕಾರ್ಯಗಳಲ್ಲಿ ತೊಡಗುವುದು, ಅನ್ಯರು ಮಾಡಿದ ಉಪಕಾರವನ್ನು ಅಸಡ್ಡೆ ಮಾಡುವುದು, ನೋಡುವವರನ್ನು ಮೆಚ್ಚಿಸಲು ಬೂಟಾಟಿಕೆ ಕಾರ್ಯಗಳನ್ನು ಮಾಡುವುದು, ಪರಹಿಂಸೆಯಿಂದ ಆನಂದಪಡುವುದು, ಪರಂಪರೆಯಿಂದ ಬಂದಿರುವ ಧರ್ಮ ಕರ್ಮಗಳನ್ನು ತೊರೆಯುವುದು ಎಂಬಿವು ಪಾಪವು ತಲೆಯೆತ್ತಲು ಕಾರಣಗಳಾಗಿವೆ. ಪಾಪಸಂಚಯವೆಂದರೆ ಅದು ಭ್ರಷ್ಟಾಚಾರದ ಪರಿಣಾಮವೇ ಆಗಿದೆ.

## ಭ್ರಷ್ಟಾಚಾರದ ಪೆಡಂಭೂತ

ಪ್ರಸಕ್ತ ಸನ್ನಿವೇಶದಲ್ಲಿ ಭ್ರಷ್ಟಾಚಾರವು ರಕ್ತಬೀಜಾಸುರನಂತೆ ಭರತಖಂಡವನ್ನು ಕಾಡುತ್ತಿದೆ. ಯಾವ ದಿನಪತ್ರಿಕೆಗಳನ್ನಾಗಲಿ, ದೂರದರ್ಶನ ವಾಹಿನಿಯನ್ನಾಗಲಿ ಕಣ್ಣಿಟ್ಟು ನೋಡಿದರೆ ಸಾಕು, ಭ್ರಷ್ಟಾಚಾರದ ಅನಂತ ಕುರೂಪಗಳು ಅನಾವರಣಗೊಂಡಿರುತ್ತವೆ.

'ಸಾಚಾ ಜಗತ್ತಿಗೆ' ಸಮಾನಾಂತರವಾಗಿ 'ನಕಲಿ ಜಗತ್ತೊಂದು ಕೆಲಸಮಾಡುತ್ತಿದೆ. ನಕಲಿ ನೋಟುಗಳು, ನಕಲಿ ಔಷಧಗಳು, ನಕಲಿ ಮದ್ಯಗಳು, ನಕಲಿ ಹಾಲು, ನಕಲಿ ಸುಗಂಧದ್ರವ್ಯಗಳು, ನಕಲಿ ಗೃಹಬಳಕೆಯ ವಸ್ತುಗಳು ಎಂಬಂತೆ ನಕಲಿಯ ಜಾಲ ವಿಸ್ತಾರವಾಗಿ ಹರಡಿಕೊಂಡಿದೆ. ನಕಲಿ ಡಿಗ್ರಿ ಸರ್ಟಿಫಿಕೇಟುಗಳು, ನಕಲಿ ಅಂಕಪಟ್ಟಿಗಳು, ನಕಲಿ ಪಾಸ್‌ಪೋರ್ಟುಗಳು. ಬೇರೆಬೇರೆ ಸಂದರ್ಭಗಳಿಗೆ ಬೇಕಾಗುವ ನಕಲಿ ದಾಖಲೆಗಳು – ಎಲ್ಲವೂ ಪ್ರತಿಸೃಷ್ಟಿಗೊಳ್ಳುತ್ತಿವೆ. ಚಿಕಿತ್ಸೆಗೆಂದು ಆಸ್ಪತ್ರೆಗಳಿಗೆ ಹೋಗುವ ಕೆಲವು ರೋಗಿಗಳ ಮೂತ್ರಪಿಂಡವನ್ನು ಕೂಡ ಕತ್ತರಿಸಿ ಕದ್ದುಬಿಡುವ ಗುಪ್ತವೈದ್ಯಜಾಲವೊಂದಿದೆ. ತನ್ನಂತೆಯೇ ಬದುಕಬೇಕಾದ ಸಹಮಾನವನೊಬ್ಬನ ಅಂಗಾಂಗಳನ್ನೇ ಮತ್ತೊಬ್ಬನು ಅಪಹರಿಸಿಬಿಡುತ್ತಾನೆಂದರೆ, ಭ್ರಷ್ಟಾಚಾರದ ಪೆಡಂಭೂತ ಹೇಗೆ ಮಾನವೀಯತೆಯನ್ನು ನುಂಗುತ್ತಿದೆ ಎಂಬುದರ ಅರಿವಾಗದಿರದು.

## ರಾಜಕಾರಣವು ಉಗಮಸ್ಥಾನ

ರಾಜಕಾರಣವು ಭ್ರಷ್ಟಾಚಾರದ ಉಗಮಸ್ಥಾನ. ಚುನಾವಣೆಗಳಿಂದ ಅದು ಪ್ರಾರಂಭವಾಗುತ್ತದೆ. ದ್ರವ್ಯಬಲ, ವರ್ಣಬಲ, ತೋಳ್ಬಲಗಳನ್ನು ಬಳಸಿಕೊಂಡು ಗೆಲುವು ಸಾಧಿಸಿ, ಅಧಿಕಾರದ ಗದ್ದುಗೆಯೇರುವುದು ಮೊದಲನೆಯ ಹಂತ. ಈಗೀಗ ಅಪರಾಧಗಳ ಹಿನ್ನೆಲೆಯವರೂ ಪ್ರವೇಶ ಮಾಡುತ್ತಿರುವುದು ಆತಂಕಕಾರಿಯಾಗಿದೆ. ಗದ್ದುಗೆಯೇರಿದ ಬಳಿಕ ಸದ್ದಿಲ್ಲದೆ ತಾನು ವೆಚ್ಚ ಮಾಡಿದುದನ್ನೆಲ್ಲ ಅಕ್ಷಯವಾಗಿ ಕೂಡಿ ಹಾಕಿಕೊಳ್ಳುವ ಕಾರ್ಯ ಪ್ರಾರಂಭವಾಗುತ್ತದೆ. ಅದರ ಸಾಧನೆಗಾಗಿ ಮಾಡುವ ಅಕ್ರಮ ಪ್ರಯತ್ನಗಳೇ ಭ್ರಷ್ಟಾಚಾರದ ಬೇರೆ ಬೇರೆ ರೂಪಗಳು. ಲೋಕಹಿತಕ್ಕಾಗಿಯೇ ಪ್ರಜಾದ್ರವ್ಯವನ್ನು ಬಳಸುತ್ತಿದ್ದೇನೆ ಎಂದು ವಿವಿಧ ಯೋಜನೆಗಳನ್ನು ಹೂಡಿಕೊಂಡು, ಅವುಗಳ ಮರೆಯಲ್ಲಿ ಅವರಿಷ್ಟು ಇವರಿಷ್ಟು ಅಪಹರಿಸಲು ಎಡೆಮಾಡಿಕೊಟ್ಟು, ಸಿಂಹಪಾಲನ್ನು ತನ್ನದಾಗಿಸಿಕೊಳ್ಳುವುದೇ ಆ ಭ್ರಷ್ಟಾಚಾರದ ಸಂಯೋಜನೆಯಾಗಿರುತ್ತದೆ. ರಾಜಮಹಾರಾಜರ ಹಾಗೆ ಐಷಾರಾಮಿ ಜೀವನ ನಡೆಸಬೇಕು, ಧನಕನಕ ವಸ್ತುವಾಹನಗಳನ್ನು ವಿಪುಲವಾಗಿ ಗುಡ್ಡೆಹಾಕಿಕೊಳ್ಳಬೇಕು, "ಅಧಿಕಾರ ನನ್ನ ಕೈಲಿರುವಾಗ ನಾನು ಏನು ಬೇಕಾದರೂ ಮಾಡಬಲ್ಲೆ" ಎಂಬ ಅಹಂಕಾರದ ವರ್ತನೆ ಆ ಭ್ರಷ್ಟಾಚಾರದ ಮರಿಗಳಾಗಿ ಮುಂದುವರಿಯುತ್ತಿರುತ್ತವೆ.

**ಯೌವನಂ ಧನಸಂಪತ್ತಿಃ ಪ್ರಭುತ್ವಮ್ ಅವಿವೇಕತಾ ।**
**ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಃ ॥**

ಎಂದು ಸುಭಾಷಿತಕಾರರು ಹೇಳಿದ್ದಾರೆ. ಇದರರ್ಥ ಭೋಗದಲ್ಲಿ ಮುಳುಗಿಸುವ ಯೌವನ, ಅಪಾರ ಧನರಾಶಿ, ಅಧಿಕಾರದ ಗದ್ದುಗೆ, ಉಚಿತಾನುಚಿತ ಪ್ರಜ್ಞೆಯಿಲ್ಲದ ಅವಿವೇಕ – ಇವು ಒಂದೊಂದೇ ಮಾನವನ ಪತನಕ್ಕೆ ಕಾರಣವಾಗಿರುವಾಗ, ಈ ನಾಲ್ಕೂ ಒಬ್ಬನಲ್ಲೇ ಒಗ್ಗೂಡಿಸಿದರೆ ಹೇಗೆ? ರಾಜಕಾರಣವು ಅಂತಹ ಅನರ್ಥಗಳು ಒಗ್ಗೂಡುವಿಕೆಗೆ ದಾರಿಯಾಗಿದೆ.

## ಕಿತ್ತಾಟಗಳು ಮೇಲಾಟಗಳು

ರಾಜಕಾರಣದಲ್ಲಿ ನಡೆಯುವ ಕಿತ್ತಾಟ ಮೇಲಾಟಗಳು, ಆಂತರಿಕ ಕಲಹ, ತಮ್ಮ ಹಗರಣಗಳನ್ನು ಮುಚ್ಚಿಕೊಳ್ಳಲು ನಡೆಸುವ ಕುತಂತ್ರಗಳು, ಒಬ್ಬರ ಮೇಲೊಬ್ಬರು ಕೆಸರು ಎರಚುವುದು, ಒಬ್ಬರ ಮೇಲೊಬ್ಬರು ಗೂಬೆ ಕೂರಿಸುವುದು, ಪ್ರಜೆಗಳ ಗಮನವನ್ನು ರಾಷ್ಟ್ರಾಭಿವೃದ್ಧಿಯ ವಿಷಯಗಳಿಂದ ಬೇರೆ ದಿಕ್ಕುಗಳಿಗೆ ಸೆಳೆಯುವುದು ಮುಂತಾದುವು ಭ್ರಷ್ಟಾಚಾರವು ಉಲ್ಬಣಿಸಲು ಕಾರಣವಾಗುತ್ತಿವೆ.

**ಸಂಸಾರವೆಂಬ ಹೆಣಬಿದ್ದರೆ**
**ತಿನಬಂದ ನಾಯಿಜಗಳವ ನೋಡಿರೇ**
**ನಾಯಿಜಗಳವ ನೋಡಿ ಹೆಣನೆದ್ದು ನಗುತ್ತಿದೆ**
**ಗುಹೇಶ್ವರಲಿಂಗವಲ್ಲಿಲ್ಲ ಕಾಣಿರೇ ॥**

ಎಂಬ ಅಲ್ಲಮಪ್ರಭುವಿನ ವಚನ ಈ ಹೊತ್ತಿನಲ್ಲಿ ನೆನಪಿಗೆ ಬರುತ್ತಿದೆ. ಭ್ರಷ್ಟಾಚಾರವು ಉಲ್ಬಣಿಸಿದ ತಾಣದಲ್ಲಿ ಗುಹೇಶ್ವರನಿರುವುದಿಲ್ಲ; ಧರ್ಮನೀತಿ ನ್ಯಾಯ ಸತ್ಯಗಳಿಗೆ ಅಲ್ಲಿ ಜಾಗವಿರುವುದಿಲ್ಲ. 'ಕಾಮನಿದ್ದಲ್ಲಿ ರಾಮನಿಲ್ಲ, ರಾಮನಿದ್ದಲ್ಲಿ ಕಾಮನಿಲ್ಲ; ಸೂರ್ಯನೂ ಕತ್ತಲೆಯೂ ಒಟ್ಟಿಗೇ ಇದ್ದುದನ್ನು ಯಾರಾದರೂ ಕಂಡಿದ್ದಾರೆಯೆ' ಎಂದು ತುಳಸೀದಾಸರು ಹೀಗೆ ಪ್ರಶ್ನಿಸಿದ್ದಾರೆ:

**ಜಹ ಕಾಮ್ ತಹ ನಹಿ ರಾಮ್**
**ಜಹ ರಾಮ್ ತಹ ನಹಿ ಕಾಮ್ ।**
**ತುಲಸೀ ಕಬಹೂ ದೇಖಿನಾಹೀ**
**ರವಿ ರಜನೀ ಇಕ ಠಾಮ್ ॥**

**ಯಥಾ ರಾಜಾ ತಥಾ ಪ್ರಜಾಃ** –ರಾಜನು ಹೇಗೋ ಪ್ರಜೆಗಳು ಹಾಗೆ, ತಾಯಿಯಂತೆ ಮಗಳು ನೂಲಿನಂತೆ ಸೀರೆ – ಎಂಬ ಲೋಕೋಕ್ತಿಗಳಂತೆ ಪ್ರಭುಗಳ ವರ್ತನೆಯ ಪ್ರಭಾವ ಪ್ರಜೆಗಳ ಮೇಲೂ ಬೀಳುತ್ತದೆ. ಆ ಪೈಕಿ ಸರ್ಕಾರದ ಯಂತ್ರವನ್ನು ನಡೆಸುವ ಅಧಿಕಾರಿವರ್ಗದ ಸೈನ್ಯವೇ ಪ್ರಮುಖವಾದುದು. ಅದರಲ್ಲಿ ಆನೆಯೇರಿದವರು, ಕುದುರೆಯೇರಿದವರು, ರಥವೇರಿದವರು, ಕಾಲಾಳುಗಳು ಎಂಬಂತೆ ಚತುರಂಗ ದಳದ ಶ್ರೇಣಿಗಳೆಲ್ಲವೂ ಇವೆ, ತಂತಮ್ಮ ಅಂತಸ್ತಿಗೆ ತಕ್ಕಂತೆ, ಅವರು ತಮ್ಮನ್ನಾಳುವವರ ಮರ್ಜಿಯನ್ನು ಅನುಸರಿಸಿ ಲಂಚ ತೆಗೆದುಕೊಳ್ಳುವುದು, ಕಾನೂನುಬಾಹಿರ ಕೃತ್ಯಗಳಿಗೆ ಜಾಣಗುರುಡರಾಗಿ ಕುಮ್ಮಕ್ಕು ನೀಡುವುದು, ಸರ್ಕಾರದ ಸಾರ್ವಜನಿಕ ದ್ರವ್ಯವನ್ನು ದುರುಪಯೋಗಕ್ಕೆ ತುತ್ತುಮಾಡುವುದು– ಮುಂತಾದ ಅಕೃತ್ಯಗಳಲ್ಲಿ ಮಗ್ನರಾಗಿ ಪಾಪಕೂಪಕ್ಕೆ ಬೀಳುತ್ತಿದ್ದಾರೆ. ಸರ್ಕಾರೀ ಯಂತ್ರದೊಡನೆ ಸಂಪರ್ಕಕ್ಕೆ ಬಂದು, ಅದರ ಕಡೆಯಿಂದ ತಮ್ಮದೇನೋ ಕೆಲಸವಾಗಬೇಕು ಎಂದು ಅದಕ್ಕಾಗಿ ಪರದಾಡುವ ಎಲ್ಲ ಪ್ರಜೆಗಳೂ ಒಂದಲ್ಲ ಒಂದು ಬಗೆಯಲ್ಲಿ, ಆ ಭ್ರಷ್ಟಾಚಾರದ ಜಾಲಕ್ಕೆ ಸಿಲುಕುತ್ತಿದ್ದಾರೆ. ಸಮಾಜದ ಏಳಿಗೆಗೆ ಪೂರಕವಾಗುವಂತೆ ಕೆಲಸ ಮಾಡಬೇಕಾದ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಆರಕ್ಷಕ ಸಂಘಟನೆ, ಜನಸೇವಾ ಸಂಸ್ಥೆಗಳು, ನ್ಯಾಯ ವಿತರಣೆಯ ಕೇಂದ್ರಗಳು, ಕೈಗಾರಿಕೋದ್ಯಮಗಳು, ವ್ಯಾಪಾರ ವಹಿವಾಟುಗಳು, ಸಾಹಿತ್ಯ ಕಲೆ ಸಂಸ್ಕೃತಿ ಪ್ರಸಾರದ ಮಾಧ್ಯಮಗಳು – ಮೊದಲಾದ ಎಲ್ಲವೂ ಭ್ರಷ್ಟಾಚಾರದ ಕೆಸರಿನಲ್ಲಿ ಸಿಲುಕಿ ನಲುಗಿ ಹೋಗುತ್ತಿವೆ.

## ಮಾನವೀಯತೆಯ ಸರ್ವನಾಶ

"ನಾನು ಚೆನ್ನಾಗಿರಬೇಕು, ನಾನು ಸುಖವಾಗಿರಬೇಕು, ನನ್ನವರು ಸಮೃದ್ಧರಾಗಿರಬೇಕು, ತಾನುಂಟೋ ಮೂರುಲೋಕವುಂಟೋ' ಎಂಬ ಅವಿಚಾರಗಳೇ ಆವರಿಸಿಕೊಂಡು, 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಆರ್ಯೋಕ್ತಿ ಮೌನತಾಳಿದೆ. ಭ್ರಷ್ಟಾಚಾರವು ಕೊಲೆ,